# All India Democratic Students' Organisation - AIDSO
# All India Democratic Youth Organisation - AIDYO

Bangalore District Committees

No.31, 3rd Cross, Malleswaram, Bangalore-03 Ph: 23561443


---

ಗೆ,                                                                                                          24-2-16

ಸಂಪಾದಕರು.

ಬೆಂಗಳೂರು

<u>ಪತ್ರಿಕಾ ವರದಿ:</u>

## ಪ್ರಜಾತಂತ್ರ ಹಾಗು ಮುಕ್ತ ವಿಚಾರ ಮಂಥನದ ರಕ್ಷಣೆಗಾಗಿ ವಿದ್ಯಾರ್ಥಿ-ಯುವಜನ ಸಮಾವೇಶ

ವಿಶ್ವವಿದ್ಯಾಲಯಗಳು ಮತ್ತು ಇತರ ಸಾರ್ವಜನಿಕ ವಲಯಗಳಲ್ಲಿ ಪ್ರಜಾತಂತ್ರ ಹಾಗು ಮುಕ್ತ ವಿಚಾರ ಮಂಥನ ರಕ್ಷಣೆಗಾಗಿ ಇಂದು ಯುವಿಸಿಇ ಅಲುಮ್ನಿ ಅಸೋಸಿಯೇಷನ್ ಹಾಲ್‌ನಲ್ಲಿ ವಿದ್ಯಾರ್ಥಿ-ಯುವಜನ ಸಮಾವೇಶವನ್ನು **ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (AIDSO) ಹಾಗೂ ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (AIDYO)**ನ ಬೆಂಗಳೂರು ಜಿಲ್ಲಾ ಸಮಿತಿಗಳು ಹಮ್ಮಿಕೊಂಡಿದ್ದವು.

ನೂರಾರು ಸಂಖ್ಯೆಯಲ್ಲಿ ಬೆಂಗಳೂರಿನ ಹಲವಾರು ಕಾಲೇಜುಗಳಿಂದ ವಿದ್ಯಾರ್ಥಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು. ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ನಿವೃತ್ತ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಧೀಶರು, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಲೇಖಕರೂ ಆದ **ಕೋ. ಚನ್ನಬಸಪ್ಪ,** "ಸಂವಿಧಾನವು ಪ್ರತಿಯೊಬ್ಬ ವ್ಯಕ್ತಿಗೂ ಅಭಿಪ್ರಾಯವನ್ನು ಮಂಡಿಸುವ ಚರ್ಚಿಸುವ, ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುವ ಮೂಲಭೂತ ಹಕ್ಕನ್ನು ನೀಡಿದೆ. ಈಗ್ಗೆ 40 ವರ್ಷಗಳ ಹಿಂದೆ ಕಾಂಗ್ರೆಸ್ ಸರ್ಕಾರವು ತಂದ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸರ್ಕಾರವನ್ನು ಜನರು ಟೀಕಿಸಿದ್ದರು. ಈಗಿನ ಭಾರತದ ಸಾಮಾಜಿಕ-ರಾಜಕೀಯ ಬೆಳವಣಿಗೆಗಳಿಗೆ ಮೂಕ ಪ್ರೇಕ್ಷಕರಾಗದೆ ಮೂಲಭೂತ ಹಕ್ಕುಗಳನ್ನು ಉಳಿಸಿಕೊಳ್ಳಲು ವಿದ್ಯಾರ್ಥಿ-ಯುವಜನರು ಒಗ್ಗೂಡಿ ಹೋರಾಡಬೇಕು" ಎಂದು ಕರೆ ನೀಡಿದರು.

ಹಿರಿಯ ಪತ್ರಕರ್ತರಾದ **ಶ್ರೀ ಸನತ್‌ಕುಮಾರ್ ಬೆಳಗಲಿ** ಮಾತನಾಡಿ, "ಪ್ರಜಾತಾಂತ್ರಿಕ ವ್ಯವಸ್ಥೆಯ ಮೇಲೆ ನಡೆಯುತ್ತಿರುವ ಹಲವಾರು ರೀತಿಯ ಆಕ್ರಮಣಗಳಿಗೆ ಕೇಂದ್ರ ಸರ್ಕಾರವು ಬೆಂಬಲವಾಗಿ ನಿಂತಿದೆ. ಅಂಬೇಡ್ಕರ್-ಪೆರಿಯಾರ್ ಅಧ್ಯಯನ ಕೇಂದ್ರದ ನಿಷೇದ, ರೋಹಿತ್ ವೇಮುಲ ಆತ್ಮಹತ್ಯೆ ಪ್ರಕರಣ ಇತ್ಯಾದಿ ಪ್ರಕರಣಗಳು ಖಂಡನಾರ್ಹ. ಸಂಘ ಪರಿವಾರದ ರಾಷ್ಟ್ರೀಯತಾವಾದವನ್ನೇ ನಾವು ಇಂದು ಪ್ರಶ್ನಿಸಿ ಪ್ರತಿಭಟಿಸಬೇಕು" ಎಂದು ಹೇಳಿದರು.

ಹಿರಿಯ ವಕೀಲರಾದ **ಶ್ರೀಮತಿ ಹೇಮಲತಾ ಮಹಿಷಿ** ಸಭೆಯನ್ನುದ್ದೇಶಿಸಿ, "ಮೋದಿ ಸರ್ಕಾರದ ನಿಜವಾದ ರೂಪ ಜೆಎನ್‌ಯು ಪ್ರಕರಣದಿಂದ ಹೊರಬಂದಿದೆ. ಹಲವಾರು ಪಟ್ಟಭದ್ರ ಹಿತಾಸಕ್ತಿಗಳು ಹಾಗೂ ರಾಜಕೀಯ ಪಕ್ಷಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಈ ಘಟನೆಯನ್ನು ಬಳಸಿಕೊಳ್ಳುತ್ತಿವೆ. ಕೋರ್ಟ್ ಸಭಾಂಗಣದಲ್ಲಿ ಪತ್ರಕರ್ತರು ಹಾಗೂ ವಿದ್ಯಾರ್ಥಿಗಳ ಮೇಲೆ ಹಲ್ಲೆ ಮಾಡಿದ ವಕೀಲರ ದುಂಡಾವರ್ತಿಯ ವಿರುದ್ಧ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕು" ಎಂದು ಆಗ್ರಹಿಸಿದರು.

**ಎಐಡಿವೈಓ ಅಖಿಲ ಭಾರತ ಅಧ್ಯಕ್ಷರಾದ ಡಾ|| ಬಿ.ಆರ್.ಮಂಜುನಾಥ್,** "ನಿಜವಾದ ದೇಶಪ್ರೇಮವೆಂದರೆ ದೇಶದ ಬಡ ಜನತೆ ಹಾಗೂ ಅವರ ಬದುಕಿನ ಪರಿಸ್ಥಿಯನ್ನು ಉತ್ತಮಗೊಳಿಸಲು ಶ್ರಮಿಸುವುದು ಎಂದು ಅರ್ಥ. ವಿಶ್ವವಿದ್ಯಾಲಯಗಳು ಉನ್ನತ ಕಲಿಕೆಯ ತಾಣವಾಗಬೇಕು ಮತ್ತು ಮುಕ್ತವಾಗಿ ಚರ್ಚಿಸುವ ವಾತಾವರಣ ಅಲ್ಲಿ ಉಳಿಯಬೇಕು. **"ಮಿಲಿಯಾಂತರ ಜನರು ಹಸಿವೆ ಹಾಗೂ ಅಜ್ಞಾನದಲ್ಲಿ ಬದುಕುತ್ತಿರುವಾಗ, ಇವರ ಹಣದಿಂದ ಶಿಕ್ಷಣ ಪಡೆದು, ಅವರಿಗಾಗಿ ಏನನ್ನೂ ಮಾಡದ ಪ್ರತಿಯೊಬ್ಬನನ್ನು ನಾನು ದೇಶದ್ರೋಹಿ ಎಂದು ಕರೆಯುತ್ತೇನೆ"** ಎಂದ

**ವಿವೇಕಾನಂದರ** ಸೂಕ್ತಿಯೊಂದನ್ನು ನೆನಪಿಸುತ್ತಾ ಅವರು ಅಸಹಿಷ್ಣುತೆಯ ವಿರುದ್ಧದ ದೇಶದಾದ್ಯಂತ ಹೋರಾಟವನ್ನು ತೀವ್ರಗೊಳಿಸಬೇಕು" ಎಂದು ಕರೆ ನೀಡಿದರು.

**ಎಐಡಿಎಸ್‌ಓ ರಾಜ್ಯಾಧ್ಯಕ್ಷರಾದ ವಿ.ಎನ್.ರಾಜಶೇಖರ್,** "ಕೇಂದ್ರ ಸರ್ಕಾರದ ವಿರುದ್ಧ ಧ್ವನಿ ಎತ್ತುವವರಿಗೆ 'ಕಾಂಗ್ರೆಸ್ ಪರ' ಎಂಬ ಹಣೆಪಟ್ಟಿ ಕಟ್ಟುವುದು ಬಲಪಂಥೀಯ ಶಕ್ತಿಗಳ ಕುತಂತ್ರ. ಆದರೆ, ಎಐಡಿಎಸ್‌ಓ ಆರಂಭದಿಂದಲೂ ಎಲ್ಲ ಸರ್ಕಾರಗಳು ಜಾರಿಗೆ ತಂದಿರುವ ಶಿಕ್ಷಣ ವಿರೋಧಿ ನೀತಿಗಳನ್ನು ವಿರೋಧಿಸುತ್ತಾ ಬಂದಿದೆ. ದೇಶದ ಮೇಲೆ ಹೇರಲ್ಪಟ್ಟ ತುರ್ತು ಪರಿಸ್ಥಿತಿಯ ವಿರುದ್ಧ ಕೂಡ ಎಐಡಿಎಸ್‌ಓ ಹೋರಾಟದಲ್ಲಿತ್ತು. 'ನೀವು ನಮ್ಮೊಂದಿಗಿಲ್ಲದಿದ್ದರೆ, ನೀವು ಅವರೊಂದಿಗಿದ್ದೀರಿ' ಎಂಬ ಧೋರಣೆಯನ್ನು ಸಂಘ ಪರಿವಾರವು ಹೊಂದಿದೆ" ಎಂದರು. ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾದ ಪರವಾಗಿ ಚಿಕ್ಕರಾಜು ಈ ಹೋರಾಟಕ್ಕೆ ಬೆಂಬಲವನ್ನು ವ್ಯಕ್ತಪಡಿಸಿದರು. ತಮ್ಮ ಭಾಷಣವನ್ನು **ನೇತಾಜಿ ಸುಭಾಷಚಂದ್ರ ಬೋಸ್‌ರ ಸೂಕ್ತಿಯೊಂದಿಗೆ ಅಂತ್ಯಮಾಡಿದರು, "ಅನ್ಯಾಯವನ್ನು ಪ್ರತಿಭಟಿಸುವುದನ್ನೇ ನೀವು ರಾಜಕೀಯ ಎಂದು ಕರೆಯುವುದಾದರೆ ಈ ದೇಶದ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ ರಾಜಕೀಯ ಸೇರುವುದು ಬಿಟ್ಟರೆ ಬೇರೆ ದಾರಿಯೇ ಇಲ್ಲ."**

ಧನ್ಯವಾದಗಳೊಂದಿಗೆ,

ಸುದ್ದಿ ಇವರಿಂದ,

**(ರವಿಚಂದನ್.ಬಿ.ಬಿ)**

**ಕಾರ್ಯದರ್ಶಿ, ಬೆಂಗಳೂರು ಜಿಲ್ಲಾ ಸಮಿತಿ,**

**ಎಐಡಿಎಸ್‌ಓ**